## ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| 1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 781 |
| 2. ಸದಸ್ಯರ ಹೆಸರು | : | ಶ್ರೀ ಟಿ. ಎನ್. ಜವರಾಯಿಗೌಡ, (ವಿಧಾನಸಭೆಯಿಂದ ಚುನಾಯಿತರಾದವರು) |
| 3. ಉತ್ತರಿಸಬೇಕಾದ ದಿನಾಂಕ | : | 10.03.2026 |
| 4. ಉತ್ತರಿಸುವ ಸಚಿವರು | : | ಮಾನ್ಯ ಜವಳಿ, ಕಬ್ಬು ಅಭಿವೃದ್ಧಿ ಮತ್ತು ಸಕ್ಕರ ಹಾಗೂ ಕೃಷಿ ಮಾರುಕಟ್ಟೆ ಸಚಿವರು |

| ಕ್ರ.ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿರುವ ಕೃಷಿ ಉತ್ಪನ್ನ ಮಾರುಕಟ್ಟೆಗಳ ಸಂಖ್ಯೆ ಎಷ್ಟು; (ಜಿಲ್ಲಾವಾರು ಮಾಹಿತಿ ನೀಡುವುದು) | ರಾಜ್ಯದಲ್ಲಿ 170 ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಗಳನ್ನು ಸ್ಥಾಪಿಸಲಾಗಿದೆ.<br><br>ಮುಖ್ಯ ಮಾರುಕಟ್ಟೆ ಪ್ರಾಂಗಣ – 170<br><br>ಉಪ ಮಾರುಕಟ್ಟೆ ಪ್ರಾಂಗಣ – 412<br><br>(ಜಿಲ್ಲಾವಾರು ಮಾಹಿತಿಯನ್ನು **ಅನುಬಂಧ-1**ರಲ್ಲಿ ಒದಗಿಸಿದೆ) |
| ಆ) | ಈ ಕೃಷಿ ಉತ್ಪನ್ನ ಮಾರುಕಟ್ಟೆಯಲ್ಲಿ ರೈತರಿಗೆ ಯಾವುದೇ ರೀತಿಯ ಮೂಲ ಸೌಕರ್ಯ ಇಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು; (ವಿವರ ನೀಡುವುದು) | ರಾಜ್ಯದ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಗಳಲ್ಲಿ ಅಗತ್ಯ ಮೂಲಭೂತ ಸೌಕರ್ಯಗಳಾದ ಕುಡಿಯುವ ನೀರಿನ ವ್ಯವಸ್ಥೆ ಶೌಚಾಲಯ, ವಿದ್ಯುತ್ ಸೌಲಭ್ಯ, ರಸ್ತೆಗಳು, ಚರಂಡಿ, ಗೋದಾಮುಗಳು, ಮುಚ್ಚು ಹರಾಜುಕಟ್ಟೆ, ಒಣಗಿಸುವ ಕಟ್ಟೆ, ರೈತಭವನ, ತೂಕದ ಯಂತ್ರ, ಸೈಲೋಸ್, ಶೀತಲಗೃಹ, ಕ್ಲೀನಿಂಗ್, ಗ್ರೇಡಿಂಗ್ ಮತ್ತು ಪ್ಯಾಕಿಂಗ್ ಘಟಕ, ವೇಬ್ರಿಡ್ಜ್, ತೂಕದ ಯಂತ್ರಗಳು, ಅಸ್ಸೆಯಿಂಗ್ ಲ್ಯಾಬ್, ಕುರಿ ಮತ್ತು ಮೇಕೆ ಸಂತೆ ಅಭಿವೃದ್ಧಿ, ಇತ್ಯಾದಿಗಳನ್ನು ಅವಶ್ಯಕತೆಗೆ ಅನುಗುಣವಾಗಿ ಸಮಿತಿಗಳ ನಿಧಿ ಹಾಗೂ ರಾಜ್ಯ ಮತ್ತು ಕೇಂದ್ರ ಸರ್ಕಾರದ ಅನುದಾನದಲ್ಲಿ ಕೈಗೊಳ್ಳಲಾಗುತ್ತಿದೆ. |
| ಇ) | ಈ ಮಾರುಕಟ್ಟೆಗಳಲ್ಲಿ ರೈತರಿಗೆ ತೂಕದಲ್ಲಿ ಮಾಡುತ್ತಿರುವ ಮತ್ತು ದಲ್ಲಾಳಿಗಳಿಂದ ಆಗುತ್ತಿರುವ ಮೋಸದ ಬಗ್ಗೆ ಸರ್ಕಾರದ ಗಮನಕ್ಕೆ ಬಂದಿಲ್ಲವೇ; ಬಂದಿದ್ದಲ್ಲಿ, ಸರ್ಕಾರ ಕೈಗೊಂಡಿರುವ ಕ್ರಮಗಳ ವಿವರ ನೀಡುವುದು; | ಮಾರುಕಟ್ಟೆಗಳಲ್ಲಿ ರೈತರಿಗೆ ತೂಕದಲ್ಲಿ ಮಾಡುತ್ತಿರುವ ಮತ್ತು ದಲ್ಲಾಳಿಗಳಿಂದ ಆಗುತ್ತಿರುವ ಮೋಸದ ಬಗ್ಗೆ ಸರ್ಕಾರದ ಗಮನಕ್ಕೆ ಬಂದಿದ್ದು, ಸರ್ಕಾರವು ಕೈಗೊಂಡ ಕ್ರಮದ ವಿವರ ಈ ಕೆಳಕಂಡಂತಿದೆ:-<br><br>ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಗಳಲ್ಲಿ ಸರ್ಕಾರ ರಚಿಸಿದ ರಾಷ್ಟ್ರೀಯ ಇ-ಮಾರ್ಕೆಟ್ ಸರ್ವೀಸಸ್ ಸಂಸ್ಥೆಯ ಏಕೀಕೃತ ಮಾರಾಟ ವೇದಿಕೆ ಮೂಲಕ ಆನ್ ಲೈನ್ ವಹಿವಾಟಿಗೆ ಅವಕಾಶ ಕಲ್ಪಿಸಿರುವುದರಿಂದ ವ್ಯಾಪಾರ ವಹಿವಾಟಿನಲ್ಲಿ ಹೆಚ್ಚಿನ ಪಾರದರ್ಶಕತೆಗೆ ಅವಕಾಶವಾಗಿದೆ.<br>ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಗಳ ಪ್ರಾಂಗಣಗಳಲ್ಲಿ ಮೂಲಭೂತ ಸೌಕರ್ಯ ಗಳ ಜೊತೆಗೆ ಎಲೆಕ್ಟ್ರಾನಿಕ್ ತೂಕದ ಯಂತ್ರ ಬಳಕೆ, ವೇಬ್ರಿಡ್ಜ್ ಗಳ ಅಳವಡಿಕೆ ಮೂಲಕ ನಿಖರವಾದ ತೂಕ ದಾಖಲಿಕೆಗೆ ಅವಕಾಶ ಕಲ್ಪಿಸಲಾಗಿದೆ. |

| | | |
|---|---|---|
| | | ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ ವ್ಯವಸ್ಥೆಯಲ್ಲಿ ರೈತರಿಂದ್ ಆಯ್ಕೆಯಾದ ಸದಸ್ಯರುಗಳನ್ನೊಳಗೊಂಡಂತೆ ಆಡಳಿತ ಮಂಡಳಿ ಕಾರ್ಯ ನಿರ್ವಹಿ ಸುತ್ತಿದೆ. ಮಾರುಕಟ್ಟೆ ಕಾಯ್ದೆಯಲ್ಲಿ ಮಾರುಕಟ್ಟೆ ಪ್ರಾಂಗಣಗಳಲ್ಲಿ ಸಗಟು ವ್ಯಾಪಾರ ವಹಿವಾಟು ನಡೆಸಲು ಅವಕಾಶ ಕಲ್ಪಿಸಿದ್ದು, ಅದರ ನಿಯಂತ್ರಣ ಹಾಗೂ ಮೇಲುಸ್ತುವಾರಿ ನಡೆಸುವ ಪ್ರಮುಖ ಜವಾಬ್ದಾರಿಯನ್ನು ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಗಳು ಹೊಂದಿರುತ್ತವೆ.<br>ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಗಳು ಮಾರುಕಟ್ಟೆ ಕಾಯ್ದೆಯಲ್ಲಿ ಗೊತ್ತು ಪಡಿಸಿರುವ ಪೇಟೆಕಾರ್ಯಕರ್ತರಾದ ದಲ್ಲಾಲರು, ವರ್ತಕರು ಮುಂತಾದವರಿಗೆ ಲೈಸೆನ್ಸ್‌ಗಳನ್ನು ನೀಡಿ ಲೈಸೆನ್ಸ್ ನಿಬಂಧನೆ ಗಳಂತೆ ಸದರಿಯವರು ವ್ಯಾಪಾರ ವಹಿವಾಟು ನಡೆಸುವುದನ್ನು ಮೇಲುಸ್ತುವಾರಿ ವಹಿಸುತ್ತವೆ.<br>ರೈತರ ಕೃಷಿ ಉತ್ಪನ್ನಗಳ ವಹಿವಾಟನ್ನು ಇಲಾಖೆಯು ಅಭಿವೃದ್ಧಿಪಡಿಸಿರುವ ತಂತ್ರಾಂಶದಲ್ಲಿ ಆನ್ ಲೈನ್/ ಇ-ಹರಾಜು ಪ್ರಕ್ರಿಯೆ ಮೂಲಕ ಕೈಗೊಳ್ಳಲಾಗುತ್ತಿರು ವುದರಿಂದ ರೈತರಿಗೆ ದಲ್ಲಾಳಿ/ಖರೀದಿದಾರ ರಿಂದ ಸಂಭವಿಸುವಂತಹ ಹಾನಿಗಳು ಕ್ಷೀಣಿಸಿದೆ. ಹರಾಜು ಪ್ರಕ್ರಿಯೆಯಲ್ಲಿ ತಾಂತ್ರಿಕತೆಯನ್ನು ಬಳಸಿ ಪಾರದರ್ಶಕತೆ ಯನ್ನು ಕಾಪಾಡಲಾಗಿದೆ. |
| ಈ) | ನಗರದ ಮಧ್ಯಭಾಗದಲ್ಲಿ ಸಂಚಾರ ದಟ್ಟಣೆಯ ಹಾಗೂ ಇಕ್ಕಟ್ಟಿನ ಪ್ರದೇಶದಲ್ಲಿರುವ ಯಶವಂತಪುರ ಕೃಷಿ ಉತ್ಪನ್ನ ಮಾರುಕಟ್ಟೆಯನ್ನು ಸಂಪೂರ್ಣವಾಗಿ ದಾಸನಪುರಕ್ಕೆ ಸ್ಥಳಾಂತರ ಮಾಡದಿರಲು ಕಾರಣವೇನು; (ವಿವರ ನೀಡುವುದು) | ಯಶವಂತಪುರ ಕೃಷಿ ಉತ್ಪನ್ನ ಮಾರುಕಟ್ಟೆಯನ್ನು ಸಂಪೂರ್ಣವಾಗಿ ದಾಸನಪುರಕ್ಕೆ ಸ್ಥಳಾಂತರ ಮಾಡದಿರಲು ಈ ಕೆಳಕಂಡ ಕಾರಣಗಳಿರುತ್ತವೆ:-<br>ಬೆಂಗಳೂರು ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಯ ಮಾರುಕಟ್ಟೆ ಕ್ಷೇತ್ರದಲ್ಲಿ ಅಧಿಸೂಚಿಸಲ್ಪಟ್ಟ ಕೃಷಿ ಉತ್ಪನ್ನಗಳ ಮಾರಾಟ ನಿಯಂತ್ರಣಕ್ಕಾಗಿ ದಾಸನಪುರ ಉಪ ಮಾರುಕಟ್ಟೆ ಪ್ರಾಂಗಣದಲ್ಲಿ ಎಲ್ಲಾ ಮೂಲಭೂತ ಸೌಕರ್ಯಗಳನ್ನೊಳ ಗೊಂಡಂತೆ ಮಾರುಕಟ್ಟೆಯನ್ನು ನಿರ್ಮಿಸಿ, ದಲ್ಲಾಲ/ವರ್ತಕರಿಗೆ ಮಳಿಗೆಗಳನ್ನು ಹಂಚಿಕೆ ಮಾಡಿ, ದಿನಾಂಕ:15-01-2018ರಂದು ದಾನಸಪುರ ಉಪ ಮಾರುಕಟ್ಟೆಗೆ ಸಂಪೂರ್ಣವಾಗಿ ವಹಿವಾಟನ್ನು ಸ್ಥಳಾಂತರಿಸಲಾಗಿರುತ್ತದೆ.<br><br>ಯಶವಂತಪುರ ಮುಖ್ಯ ಮಾರುಕಟ್ಟೆ ಪ್ರಾಂಗಣ ಹಾಗೂ ದಾಸನಪುರ ಉಪ ಮಾರುಕಟ್ಟೆ ಪ್ರಾಂಗಣದ ಎರಡೂ ಕಡೆ ಈರುಳ್ಳಿ, ಆಲೂಗೆಡ್ಡೆ, ಬೆಳ್ಳುಳ್ಳಿ ಹಾಗೂ ಶುಂಠಿ ಕೃಷಿ ಉತ್ಪನ್ನಗಳ ವಹಿವಾಟಿಗೆ ಅವಕಾಶ ಕಲ್ಪಿಸಿದ್ದು, ಅಕ್ಟೋಬರ್ -2018ರ ವರೆಗೆ ಪೂರ್ಣ ಪ್ರಮಾಣದಲ್ಲಿ ದಾಸನಪುರದಲ್ಲಿ ವಹಿವಾಟು ನಡೆದಿರುತ್ತದೆ.<br><br>2020ರಲ್ಲಿ ಕೋವಿಡ್ ಹರಡುವಿಕೆ ತಡೆಗಟ್ಟುವ ನಿಟ್ಟಿನಲ್ಲಿ ಯಶವಂತಪುರ ಮುಖ್ಯ ಮಾರುಕಟ್ಟೆ ಪ್ರಾಂಗಣದಿಂದ ಸಂಪೂರ್ಣವಾಗಿ ಈರುಳ್ಳಿ, ಆಲೂಗೆಡ್ಡೆ, ಬೆಳ್ಳುಳ್ಳಿ ಹಾಗೂ ಶುಂಠಿ ವಹಿವಾಟನ್ನು ದಾಸನಪುರಕ್ಕೆ ಸ್ಥಳಾಂತರಿಸಲಾಗಿದ್ದು, ವಹಿವಾಟು ನಡೆದಿರುತ್ತದೆ. |

ನಂತರದಲ್ಲಿ ದಿನಾಂಕ:10-06-2020ರ ಸರ್ಕಾರದ ಆದೇಶದಲ್ಲಿ ಯಶವಂತಪುರ ಮತ್ತು ದಾಸನಪುರದ ಪ್ರಾಂಗಣದ ಎರಡೂ ಕಡೆ ವ್ಯಾಪಾರ ವಹಿವಾಟಿಗೆ ಅವಕಾಶ ಕಲ್ಪಿಸಲಾಗಿದೆ.

ಯಶವಂತಪುರ ಮಾರುಕಟ್ಟೆ ಪ್ರಾಂಗಣವು ನಗರದ ಮಧ್ಯಭಾಗದಲ್ಲಿದ್ದು, ಈರುಳ್ಳಿ, ಆಲೂಗೆಡ್ಡೆ ಕೃಷಿ ಉತ್ಪನ್ನಗಳಿಗೆ ರಾಜ್ಯದ ಅತಿ ದೊಡ್ಡ ಪ್ರಾಥಮಿಕ ಮಾರುಕಟ್ಟೆಯಾಗಿದ್ದು, ಸುಗ್ಗಿ ಕಾಲದಲ್ಲಿ ಹೆಚ್ಚಿನ ಆವಕ ಹಾಗೂ ವಾಹನಗಳ ದಟ್ಟಣೆಯಿಂದ ಮಾರುಕಟ್ಟೆ ಪ್ರಾಂಗಣದ ಸುತ್ತಮುತ್ತಲಿನ ಸಾರ್ವಜನಿಕರಿಗೆ ಉಂಟಾಗುತ್ತಿರುವ ತೊಂದರೆಗಳನ್ನು ನಿವಾರಿಸಲು, ಮಾರುಕಟ್ಟೆ ಪ್ರಾಂಗಣದಲ್ಲಿ ಸ್ವಚ್ಛತೆ ಕಾಪಾಡಲು ನಗರದ ಹೊರವಲಯದಲ್ಲಿ ನಿರ್ಮಿಸಲಾಗಿರುವ ದಾಸನಪುರ ಉಪ ಮಾರುಕಟ್ಟೆ ಪ್ರಾಂಗಣಕ್ಕೆ ಶೀಘ್ರವಾಗಿ ಸ್ಥಳಾಂತರಿಸುವ ಉದ್ದೇಶದಿಂದ, ನಿರ್ದೇಶಕರು ಕೃಷಿ ಮಾರಾಟ ಇಲಾಖೆಯ ಕೇಂದ್ರ ಕಛೇರಿ ಅಧಿಸೂಚನೆ ಸಂ:ಕೃಮಾಇ/ ನಿಯವಿ/ಎಂಐಎಸ್ ಸಿ/ಅಧಿಸೂಚನೆ/ 16/ 2023, ದಿನಾಂಕ:24-02-2023 ರಲ್ಲಿ ಬೆಂಗಳೂರು ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಯ ಮಾರುಕಟ್ಟೆ ಕ್ಷೇತ್ರದಲ್ಲಿನ ಯಶವಂತಪುರ ಮುಖ್ಯ ಮಾರುಕಟ್ಟೆ ಪ್ರಾಂಗಣದಲ್ಲಿ ಅಧಿಸೂಚಿಸಲ್ಪಟ್ಟಿರುವ ಕೃಷಿ ಉತ್ಪನ್ನಗಳಲ್ಲಿ ಈರುಳ್ಳಿ, ಆಲೂಗೆಡ್ಡೆ, ಬೆಳ್ಳುಳ್ಳಿ ಹಾಗೂ ಶುಂಠಿ ಕೃಷಿ ಉತ್ಪನ್ನಗಳನ್ನು ಅಪವರ್ಜಿಸಿ ದಾಸನಪುರ ಉಪ ಮಾರುಕಟ್ಟೆ ಪ್ರಾಂಗಣದಲ್ಲಿನ ಎ,ಬಿ,ಸಿ ಹಾಗೂ ಡಿ ಬ್ಲಾಕ್ ಗಳಲ್ಲಿ ಮಾತ್ರ ಮಾರಾಟ ನಿಯಂತ್ರಣಕ್ಕೆ ಒಳಪಡಿಸಿ ಘೋಷಿಸಲಾಗಿರುತ್ತದೆ.

ಈ ಸ್ಥಳಾಂತರದ ಅಧಿಸೂಚನೆಯ ವಿರುದ್ಧ ಯಶವಂತಪುರ ಪ್ರಾಂಗಣದ ವಿವಿಧ ವರ್ತಕರ ಸಂಘದವರು ಮಾನ್ಯ ರಾಜ್ಯ ಉಚ್ಚ ನ್ಯಾಯಾಲಯದಲ್ಲಿ ರಿಟ್ ಪಿಟಿಷನ್ ಸಂಖ್ಯೆ: 5452/2023 c/w 5455/ 2023 ನ್ನು ದಾಖಲಿಸಿರುತ್ತಾರೆ.
ಸದರಿ ಪ್ರಕರಣಗಳಲ್ಲಿ ಮಾನ್ಯ ಉಚ್ಚ ನ್ಯಾಯಾಲಯವು ದಿನಾಂಕ:23.11.2024 ರಂದು ನೀಡಿರುವ ತೀರ್ಪಿನಲ್ಲಿ ದಿನಾಂಕ:24.02.2023ರ ಕೇಂದ್ರ ಕಛೇರಿಯ ಸ್ಥಳಾಂತರದ ಅಧಿಸೂಚನೆಯನ್ನು ಎತ್ತಿಹಿಡಿದಿದ್ದು, ಯಶವಂತಪುರ ಮುಖ್ಯ ಮಾರುಕಟ್ಟೆ ಪ್ರಾಂಗಣದಲ್ಲಿ ಈರುಳ್ಳಿ, ಆಲೂಗೆಡ್ಡೆ, ಬೆಳ್ಳುಳ್ಳಿ ಹಾಗೂ ಶುಂಠಿ ಕೃಷಿ ಉತ್ಪನ್ನಗಳ ವಹಿವಾಟು ನಡೆಸುತ್ತಿರುವ ಪೇಟೆಕಾರ್ಯಕರ್ತರಿಗೆ ದಾಸನಪುರ ಉಪ ಮಾರುಕಟ್ಟೆ ಪ್ರಾಂಗಣದಲ್ಲಿ ಮಳಿಗೆ ಹಂಚಿಕೆ ಮಾಡಿ ಸ್ಥಳಾಂತರಿಸಲು ಹಾಗೂ ಯಶವಂತಪುರದಲ್ಲಿ ವರ್ತಕರು ಹೊಂದಿರುವ ಮಳಿಗೆಗಳ ವಿಸ್ತೀರ್ಣಕ್ಕನುಗುಣವಾಗಿ (Proportionate) ದಾಸನಪುರ ಉಪ ಮಾರುಕಟ್ಟೆ ಪ್ರಾಂಗಣದಲ್ಲಿ ಲೀವ್ ಅಂಡ್ ಲೈಸೆನ್ಸ್ ಅವಧಿ ಗರಿಷ್ಠ 55 ತಿಂಗಳು ಪೂರ್ಣ ಗೊಂಡಿರುವ ಮಳಿಗೆಗಳನ್ನು ಹಿಂಪಡೆದು ವಿಸ್ತೀರ್ಣವಾರು ಹೊಂದಾಣಿಕೆ ಮಾಡಿ ಹಂಚಿಕೆ ಮಾಡಲು ನಿರ್ದೇಶಿಸಿರುತ್ತದೆ.

ಮಾನ್ಯ ಉಚ್ಚ ನ್ಯಾಯಾಲಯದ ದಿನಾಂಕ:23-11-2024ರ ಆದೇಶ ಅನುಷ್ಠಾನಕ್ಕಾಗಿ ಮಳಿಗೆಗಳನ್ನು ವಿಸ್ತೀರ್ಣವಾರು ಹೊಂದಾಣಿಕೆ ಮಾಡಿ ಯಶವಂತಪುರ ವರ್ತಕರಿಗೆ ಹಂಚಿಕೆ ಮಾಡಲು 55 ತಿಂಗಳು ಪೂರ್ಣಗೊಂಡಿರುವ ಮಳಿಗೆಗಳನ್ನು ಸಮಿತಿ ವಶಕ್ಕೆ ನೀಡಲು ಹಾಗೂ ಬಾಕಿ ಲೀವ್ ಅಂಡ್ ಲೈಸೆನ್ಸ್ ಶುಲ್ಕವನ್ನು ಪಾವತಿಸಲು ತಿಳಿಸಿ, ದಾಸನಪುರ ವರ್ತಕರಿಗೆ ಸಮಿತಿಯು ದಿನಾಂಕ:20-12-2024ರಲ್ಲಿ ತಿಳುವಳಿಕೆ ಪತ್ರವನ್ನು ಜಾರಿ ಮಾಡಲಾಗಿತ್ತು ಇದಕ್ಕೆ ವರ್ತಕರು ಲೀವ್ ಅಂಡ್ ಲೈಸೆನ್ಸ್‌ನಿಂದ ಲೀಸ್ ಕಂ ಸೇಲ್‌ಗೆ ಪರಿವರ್ತಿಸಲು ಕೋರಿ ಮನವಿಗಳನ್ನು ಸಲ್ಲಿಸಿರುತ್ತಾರೆ.

ಸದರಿ ತಿಳುವಳಿಕೆ ಪತ್ರವನ್ನು ಹಾಗೂ ಲೀವ್ ಅಂಡ್ ಲೈಸೆನ್ಸ್ ನಿಂದ ಲೀಸ್ ಕಂ ಸೇಲ್‌ಗೆ ಪರಿವರ್ತಿಸಲು ಅವಕಾಶವಿಲ್ಲವೆಂದು ತಿಳಿಸಿ ಸಮಿತಿಯು ನೀಡಿರುವ ಹಿಂಬರಹವನ್ನು ಪ್ರಶ್ನಿಸಿ ವಿವಿಧ ಪೇಟೆ ಕಾರ್ಯಕರ್ತರುಗಳು ಮಾನ್ಯ ರಾಜ್ಯ ಉಚ್ಚ ನ್ಯಾಯಾಲಯದಲ್ಲಿ ರಿಟ್ ಪಿಟಿಷನ್ ಸಂಖ್ಯೆ:173/2025, 540/2025, 692/2025, 1536/2025 ಮತ್ತು 3011/2025 ಗಳನ್ನು ದಾಖಲಿಸಿರುತ್ತಾರೆ ಹಾಗೂ ನೆಲಮಂಗಲ ಜೆ.ಎಂ.ಎಫ್.ಸಿ ನ್ಯಾಯಾಲಯ ದಲ್ಲಿ ಓ.ಎಸ್.ನಂ: 46/2025 ನ್ನು ದಾಖಲಿಸಿರುತ್ತಾರೆ.

ಮಾನ್ಯ ರಾಜ್ಯ ಉಚ್ಚ ನ್ಯಾಯಾಲಯವು ರಿಟ್ ಪಿಟಿಷನ್ ಸಂಖ್ಯೆ: 3011/2025 C/w 173/2025, 540/2025, 692/2025, 1536/2025ರ ಪ್ರಕರಣಗಳಲ್ಲಿ ದಿನಾಂಕ:18-07-2025 ರಂದು ತೀರ್ಪನ್ನು ಹೊರಡಿಸಿದ್ದು, ಸದರಿ ತೀರ್ಪಿನಲ್ಲಿ ಅರ್ಜಿಗಳನ್ನು ವಜಾಗೊಳಿಸಿ ಸಮಿತಿಯ ಪರ ತೀರ್ಪು ನೀಡಿರುತ್ತದೆ.
ಮಾನ್ಯ ನ್ಯಾಯಾಲಯದ ಆದೇಶವನ್ನು 15 ದಿನಗಳೊಳಗಾಗಿ ಅನುಷ್ಠಾನಗೊಳಿಸಲು ಸೂಚಿಸಿದ್ದು, ಅದರಂತೆ, ಪೇಟೆಕಾರ್ಯ ಕರ್ತರಿಗೆ ಮಳಿಗೆ ಬೇಕೋ ಅಥವಾ ಹರಾಜುಕಟ್ಟೆ ಬೇಕೋ ಎಂಬ ಬಗ್ಗೆ ಆಯ್ಕೆ ಕೇಳಿ ನೊಂದಣಿ ಅಂಚೆ/ಮುದ್ದಾಂ ಮೂಲಕ ನೋಟೀಸ್ ಜಾರಿಗೊಳಿಸಿ ದಿನಾಂಕ:23-08-2025ರ ವಿಜಯ ಕರ್ನಾಟಕ ಮತ್ತು ಡೆಕ್ಕನ್ ಹೆರಾಲ್ಡ್ ದಿನಪತ್ರಿಕೆಗಳಲ್ಲಿ ಪ್ರಕಟಣೆ ಹೊರಡಿಸಿದೆ.

ಸಮಿತಿಯ ತಿಳುವಳಿಕೆ ಅನ್ವಯ ಪೇಟೆಕಾರ್ಯಕರ್ತರು ಯಾವುದೇ ಆಯ್ಕೆ ನೀಡದ ಕಾರಣ ಮಾನ್ಯ ನ್ಯಾಯಾಲಯದ ಆದೇಶದನ್ವಯ Eviction Act ಅಡಿಯಲ್ಲಿ ನೋಟೀಸ್ ಜಾರಿಗೊಳಿಸಿ 45 ದಿನಗಳ ಕಾಲಾವಕಾಶದೊಳಗೆ ಅಂಗಡಿಗಳನ್ನು ಖಾಲಿ ಮಾಡುವಂತೆ ದಿನಾಂಕ:23-09-2025ರಂದು ಆದೇಶವನ್ನು ಜಾರಿಗೊಳಿಸಿರುತ್ತದೆ.

Eviction Act ಅಡಿಯಲ್ಲಿ ಹೊರಡಿಸಿದ ದಿ:23-09-2025ರ ಆದೇಶದ ವಿರುದ್ಧ ದಾಸನಪುರ ಉಪ ಮಾರುಕಟ್ಟೆ ಪ್ರಾಂಗಣದ ವರ್ತಕರು ಜಿಲ್ಲಾ ಸಿಟಿ ಸಿವಿಲ್ ಮತ್ತು ಸೆಷನ್ ನ್ಯಾಯಾಲಯ, ಬೆಂಗಳೂರು ಇಲ್ಲಿ 94 Misc. Application ಗಳನ್ನು ದಾಖಲಿಸಿದ್ದು, 54 ವರ್ತಕರಿಗೆ ದಿನಾಂಕ:06-11-

2025ರಂದು ತಡೆಯಾಜ್ಞೆ ನೀಡಿದ್ದು, ಸಮಿತಿಯು ಇದಕ್ಕೆ ಆಕ್ಷೇಪಣೆಗಳನ್ನು ಸಲ್ಲಿಸಿರುತ್ತದೆ. ಸದರಿ ಆಕ್ಷೇಪಣೆಗಳು ಹಾಗೂ ವಾದ ಮತ್ತು ಪ್ರತಿವಾದಗಳನ್ನು ಆಲಿಸಿದ ಮಾನ್ಯ ನ್ಯಾಯಾಲಯವು ದಿನಾಂಕ:19-12-2025 ರಂದು ಸದರಿ ತಡೆಯಾಜ್ಞೆಗಳನ್ನು ತೆರವುಗೊಳಿಸಿ ಅರ್ಜಿಗಳನ್ನು ವಜಾಗೊಳಿಸಿರುತ್ತದೆ.

ಈ ಹಿನ್ನಲೆಯಲ್ಲಿ ಮಾನ್ಯ ನ್ಯಾಯಾಲಯದ ಆದೇಶವನ್ನು ಅನುಷ್ಠಾನಗೊಳಿಸಲು ದಿನಾಂಕ:23-12-2025ರಂದು ಪೊಲೀಸ್ ಬಂದೋಬಸ್ತ್ ನೊಂದಿಗೆ Eviction Act ಅಡಿಯಲ್ಲಿ ಹೊರಡಿಸಿದ್ದ ದಿನಾಂಕ:23-09-2025ರ ಆದೇಶದನ್ವಯ ದಾಸನಪುರ ಉಪ ಮಾರುಕಟ್ಟೆ ಪ್ರಾಂಗಣದ ಎ ಮತ್ತು ಬಿ-ಬ್ಲಾಕಿನ ಮಳಿಗೆಗಳನ್ನು ಯಥಾಸ್ಥಿತಿಯಲ್ಲಿ ಬೀಗ ಹಾಕಿ ಸಮಿತಿಯ ವಶಕ್ಕೆ ಪಡೆಯಲು ಸಮಿತಿಯ ಅಧಿಕಾರಿ/ಸಿಬ್ಬಂದಿಗಳೊಂದಿಗೆ ಕಾರ್ಯಾಚರಣೆ ನಡೆಸಿ ಎ-ಬ್ಲಾಕಿನ 64 ಸಂಖ್ಯೆ ಮಳಿಗೆಗಳಿಗೆ ಬೀಗ ಹಾಕಿ ಸಮಿತಿಯ ವಶಕ್ಕೆ ಪಡೆಯಲಾಗಿರುತ್ತದೆ.

ಆದರೆ, ದಾಸನಪುರದ ಬಿ-ಬ್ಲಾಕಿನಲ್ಲಿ ಕಾರ್ಯಾಚರಣೆ ನಡೆಸಲು ವರ್ತಕರು ತೀವ್ರವಾಗಿ ಪ್ರತಿರೋಧ ವ್ಯಕ್ತಪಡಿಸಿ, ಗಲಾಟೆ ಮಾಡಿ ಅಡಚಣೆ ಉಂಟು ಮಾಡಿದ್ದರಿಂದ ಹಾಗೂ ಸದರಿ ದಿನದಂದೇ ವರಲಕ್ಷ್ಮೀ ಟ್ರೇಡರ್ಸ್ ಮತ್ತು ಇತರೆ 13 ಜನ ವರ್ತಕರು ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ದಾಖಲಿಸಿದ್ದ ರಿಟ್ ಪಿಟಿಷನ್ ಸಂಖ್ಯೆ.38807/ 2025ರ ಪ್ರಕರಣದಲ್ಲಿ 14 ಜನ ವರ್ತಕರಿಗೆ ಮಾನ್ಯ ಉಚ್ಚ ನ್ಯಾಯಾಲಯವು ತಾತ್ಕಾಲಿಕ ತಡೆ ನೀಡಿದ್ದರಿಂದ ಹಾಗೂ ಸಾಕಷ್ಟು ಪೊಲೀಸ್ ಬಂದೋಬಸ್ತ್ ಇಲ್ಲದ ಕಾರಣ ಕಾರ್ಯಾಚರಣೆಯನ್ನು ಸ್ಥಗಿತ ಗೊಳಿಸಿ ಈ ಕುರಿತು ಕಾನೂನು ಕ್ರಮ ಕೈಗೊಳ್ಳುವಂತೆ ಮಾದನಾಯಕನಹಳ್ಳಿ ಪೊಲೀಸ್ ಠಾಣೆಗೆ ಪತ್ರ ಬರೆಯಲಾಗಿರುತ್ತದೆ.

Eviction Act ಅಡಿಯಲ್ಲಿ ಮಳಿಗೆಗಳನ್ನು ಸಮಿತಿಯ ವಶಕ್ಕೆ ಪಡೆಯುವ ಸಮಿತಿಯ ಆದೇಶದ ವಿರುದ್ಧ ಆಂಜನೇಯ ಟ್ರೇಡರ್ಸ್ ಮತ್ತು ಇತರೆ ಒಂಭತ್ತು ವರ್ತಕರು ದಾಖಲಿಸಿದ್ದ ರಿಟ್ ಪಿಟಿಷನ್ ಸಂಖ್ಯೆ. 39132/2025ರಲ್ಲಿ ಹಾಗೂ ಎನ್.ಆರ್. ಟ್ರೇಡಿಂಗ್ ಮಂಡಿ ಮತ್ತು ಇತರೆ ಮೂವರು ವರ್ತಕರು ದಾಖಲಿಸಿದ್ದ ರಿಟ್ ಪಿಟಿಷನ್ ಸಂಖ್ಯೆ. 39197/2025ರ ಪ್ರಕರಣಗಳಲ್ಲಿ ಮಾನ್ಯ ನ್ಯಾಯಾಲಯವು ದಿನಾಂಕ: 30-12-2025 ಮತ್ತು ದಿನಾಂಕ:06-01-2026ರ ದೈನಂದಿನ ಆದೇಶಗಳಲ್ಲಿ ತಾತ್ಕಾಲಿಕ ತಡೆ ನೀಡಿದ್ದರಿಂದ ಮಾನ್ಯ ನ್ಯಾಯಾಲಯದ ಆದೇಶದನ್ವಯ ದಾಸನಪುರದ ಎ-ಬ್ಲಾಕ್ ನಲ್ಲಿ ಬೀಗ ಹಾಕಿದ್ದ 05 ಜನ ಅರ್ಜಿದಾರರ ಮಳಿಗೆಗಳ ಬೀಗಗಳನ್ನು ತೆರವು ಮಾಡಿಕೊಡ ಲಾಗಿರುತ್ತದೆ.

ರಿಟ್ ಪಿಟಿಷನ್ ಸಂ:5452/2023 c/w 5455/2023ರ

| | | |
|---|---|---|
| | | ದಿನಾಂಕ:23-11-2024ರ ತೀರ್ಪಿನ ವಿರುದ್ಧ ಯಶವಂತಪುರ ಮುಖ್ಯ ಮಾರುಕಟ್ಟೆ ಪ್ರಾಂಗಣದ ವರ್ತಕ ಸಂಘದವರು ಮೇಲ್ಮನವಿ ಸಂಖ್ಯೆ.111/2025 ಮತ್ತು 105/2025ನ್ನು ದಾಖಲಿಸಿದ್ದು, ಪ್ರಕರಣವು ವಿಚಾರಣೆಯ ಹಂತದಲ್ಲಿರುತ್ತದೆ. ರಿಟ್ ಪಿಟಿಷನ್ ಸಂಖ್ಯೆ: 3011/2025 C/w 173/2025, 540/2025, 692/2025, 1536/2025ರ ಪ್ರಕರಣಗಳಲ್ಲಿ ದಿನಾಂಕ:18-07-2025ರ ವಿರುದ್ಧ ನೀಡಿರುವ ತೀರ್ಪಿನ ವಿರುದ್ಧ ದಾಸನಪುರ ವರ್ತಕರು ಮೇಲ್ಮನವಿ ಸಂಖ್ಯೆ.1424/2025ನ್ನು ದಾಖಲಿಸಿದ್ದು, ಸದರಿ 03 ಮೇಲ್ಮನವಿ ಅರ್ಜಿಗಳು ಗೌರವಾನ್ವಿತ ಮುಖ್ಯ ನ್ಯಾಯಾಧೀಶರ ಮುಂದೆ ವಿಚಾರಣೆಯ ಹಂತದಲ್ಲಿರುತ್ತದೆ. |
| ಊ) | ಈ ಮಾರುಕಟೆಯನ್ನು ಎಷ್ಟು ದಿನಗಳೊಳಗಾಗಿ ಸಂಪೂರ್ಣವಾಗಿ ದಾಸನಪುರಕ್ಕೆ ಸ್ಥಳಾಂತರಿಸ ಲಾಗುವುದು? (ಮಾಹಿತಿ ನೀಡುವುದು) | • ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ತಾತ್ಕಾಲಿಕ ತಡೆ ಇರುವ ಮಳಿಗೆಗಳನ್ನು ಹೊರತುಪಡಿಸಿ ಬಾಕಿಯಿರುವ ಬಿ-ಬ್ಲಾಕ್‌ನ 77 ಮಳಿಗೆಗಳನ್ನು ಸಮಿತಿಯ ವಶಕ್ಕೆ ಪಡೆಯಲು ಹೆಚ್ಚಿನ ಪೊಲೀಸ್ ಬಂದೋಬಸ್ತ್ ನೀಡುವಂತೆ ಮಾನ್ಯ ಉಪ ಪೊಲೀಸ್ ಆಯುಕ್ತರನ್ನು ಕೋರಲಾಗಿದ್ದು, ಸದರಿಯವರ ಸೂಚನೆಯಂತೆ ದಿನಾಂಕ:19-02-2026ರಂದು ಉಪ ಪೊಲೀಸ್ ಆಯುಕ್ತರ ಅಧ್ಯಕ್ಷತೆಯಲ್ಲಿ ದಾಸನಪುರ ಆಡಳಿತ ಕಚೇರಿಯಲ್ಲಿ ಮಾನ್ಯ ನ್ಯಾಯಾಲಯದ ಆದೇಶವನ್ನು ಅನುಷ್ಠಾನಗೊಳಿಸುವ ನಿಟ್ಟಿನಲ್ಲಿ ದಾಸನಪುರ ವರ್ತಕರೊಂದಿಗೆ ಸಭೆಯನ್ನು ನಡೆಸಲಾಗಿದ್ದು, ವರ್ತಕರಿಗೆ ಕಾನೂನಿನ ತಿಳುವಳಿಕೆ ನೀಡಿ ಸಮಿತಿಯೊಂದಿಗೆ ಸಹಕರಿಸಲು ಸೂಚಿಸಿರುತ್ತಾರೆ.<br>• ಅದರಂತೆ, ದಿನಾಂಕ:25-02-2026ರಂದು ಮಾದನಾಯಕನಹಳ್ಳಿ ಪೊಲೀಸ್ ಠಾಣೆ ಆರಕ್ಷಕ ನಿರೀಕ್ಷಕರಿಂದ ಹೆಚ್ಚುವರಿ ಪೊಲೀಸ್ ಬಂದೋಬಸ್ತ್ ಪಡೆದು, ಸದರಿ ದಿನದಂದು ಕಾರ್ಯಾಚರಣೆ ನಡೆಸಿ ಬಾಕಿ ಇರುವ 77 ಮಳಿಗೆಗಳನ್ನು ಸಮಿತಿಯ ವಶಕ್ಕೆ ಪಡೆಯಲಾಗಿರುತ್ತದೆ.<br>ಮಾನ್ಯ ಉಚ್ಚ ನ್ಯಾಯಾಲಯದ ಆದೇಶದಂತೆ ಯಶವಂತಪುರ ಮುಖ್ಯ ಮಾರುಕಟ್ಟೆ ಪ್ರಾಂಗಣದ ದಲ್ಲಾಲರಿಗೆ ವಿಸ್ತೀರ್ಣವಾರು ಮಳಿಗೆಗಳನ್ನು ಹಂಚಿಕೆ ಮಾಡಿ ದಾಸನಪುರ ಉಪ ಮಾರುಕಟ್ಟೆ ಪ್ರಾಂಗಣಕ್ಕೆ ಸ್ಥಳಾಂತರಿಸಲು ಕ್ರಮ ವಹಿಸಲಾಗುವುದು. |

**ಸಂಖ್ಯೆ: ಸಿಒ 77 ಎಂಆರ್‌ಇ 2026**

**(ಶಿವಾನಂದ ಎಸ್. ಪಾಟೀಲ)**
**ಜವಳಿ, ಕಬ್ಬು ಅಭಿವೃದ್ಧಿ ಮತ್ತು ಸಕ್ಕರೆ**
**ಹಾಗೂ ಕೃಷಿ ಮಾರುಕಟ್ಟೆ ಸಚಿವರು**

ಅನುಬಂಧ

# ರಾಜ್ಯದಲ್ಲಿನ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಗಳ / ಉಪ ಮಾರುಕಟ್ಟೆಗಳ ಪಟ್ಟಿ

ಮುಖ್ಯ ಮಾರುಕಟ್ಟೆಗಳು : 44
ಉಪ ಮಾರುಕಟ್ಟೆಗಳು : 104

| ಕ್ರ. ಸಂ. | ಮುಖ್ಯ ಮಾರುಕಟ್ಟೆ ಹೆಸರು | ಕ್ರ. ಸಂ | ಉಪ ಮಾರುಕಟ್ಟೆಯ ಹೆಸರು | ಕ್ರ. ಸಂ | ಮಾರುಕಟ್ಟೆ ಕ್ಷೇತ್ರ ಒಳಗೊಳ್ಳುವ ತಾಲ್ಲೂಕುಗಳು |
|---|---|---|---|---|---|
| | ಬೆಂಗಳೂರು ನಗರ: | | | | |
| 1 | ಬೆಂಗಳೂರು | 1 | ಕೆ.ಆರ್.ಪುರಂ | 1 | ಬೆಂಗಳೂರು ಉತ್ತರ |
| | | 2 | ಚಂದಾಪುರ | 2 | ಬೆಂಗಳೂರು ದಕ್ಷಿಣ |
| | | 3 | ಆನೇಕಲ್ | 3 | ಬೆಂಗಳೂರು ಪೂರ್ವ |
| | | 4 | ಜಿಗಣಿ | 4 | ಆನೇಕಲ್ |
| | | 5 | ಬೊಮ್ಮನಹಳ್ಳಿ | 5 | ಯಲಹಂಕ |
| | | 6 | ದಾಸನಪುರ | | |
| 2 | ಹಣ್ಣು ಮತ್ತು ತರಕಾರಿಗಳ ವಿಶೇಷ ಕೃಉಮಾಸ ಬೆಂಗಳೂರು | 7 | ಸಿಂಗೇನ ಅಗ್ರಹಾರ | 1 | ಬೆಂಗಳೂರು ಉತ್ತರ |
| | | 8 | ಬ್ಯಾಟರಾಯನಪುರ | 2 | ಬೆಂಗಳೂರು ದಕ್ಷಿಣ |
| | | | | 3 | ಬೆಂಗಳೂರು ಪೂರ್ವ |
| | | | | 4 | ಆನೇಕಲ್ |
| | | | | 5 | ಯಲಹಂಕ |
| | ಬೆಂಗಳೂರು ಗ್ರಾಮಾಂತರ ಜಿಲ್ಲೆ: | | | | |
| 3 | ದೊಡ್ಡಬಳ್ಳಾಪುರ | 9 | ತೂಬಗೆರೆ | 6 | ದೊಡ್ಡಬಳ್ಳಾಪುರ |
| | | 10 | ನೆಲಮಂಗಲ | 7 | ದೇವನಹಳ್ಳಿ |
| | | 11 | ದೇವನಹಳ್ಳಿ | 8 | ನೆಲಮಂಗಲ |
| | | 12 | ವಿಜಯಪುರ | | |
| | | 13 | ಡಾಬಸ್‌ಪೇಟೆ | | |
| 4 | ಹೊಸಕೋಟೆ | 14 | ಗೊಣಕನಹಳ್ಳಿ | 9 | ಹೊಸಕೋಟೆ |
| | ರಾಮನಗರ ಜಿಲ್ಲೆ:- | | | | |
| 5 | ರಾಮನಗರ | 15 | ಮಾಗಡಿ | 10 | ರಾಮನಗರ |
| | | | | 11 | ಮಾಗಡಿ |
| 6 | ಚನ್ನಪಟ್ಟಣ | 16 | ದಾಸಾವರ | 12 | ಚನ್ನಪಟ್ಟಣ |
| | | 17 | ಹುಣಸಹಳ್ಳಿ | | |
| | | 18 | ಕುದೂರು | | |
| 7 | ಕನಕಪುರ | 19 | ದೊಡ್ಡಮುದವಾಡಿ | 13 | ಕನಕಪುರ |
| | | 20 | ಕೋಡಿಹಳ್ಳಿ | 14 | ಹಾರೋಹಳ್ಳಿ |
| | ಚಿತ್ರದುರ್ಗ ಜಿಲ್ಲೆ: | 21 | ಭೀಮಸಮುದ್ರ | | |
| 8 | ಚಿತ್ರದುರ್ಗ | 22 | ಭರಮಸಾಗರ | 15 | ಚಿತ್ರದುರ್ಗ |
| | | 23 | ತುರುವನೂರು | | |
| 9 | ಚಳ್ಳಕೆರೆ | | | 16 | ಚಳ್ಳಕೆರೆ |

| | | | | | |
|---|---|---|---|---|---|
| 10 | ರಾಂಪುರ | 24 | ಮೊಳಕಾಲ್ಮೂರು | 17 | ಮೊಳಕಾಲ್ಮೂರು |
| 11 | ಹಿರಿಯೂರು | 25 | ಧರ್ಮಪುರ | 18 | ಹಿರಿಯೂರು |
| 12 | ಹೊಸದುರ್ಗ | 26<br>27 | ಬೆಳಗೂರು<br>ಶ್ರೀರಾಂಪುರ | 19 | ಹೊಸದುರ್ಗ |
| 13 | ಹೊಳಲ್ಕೆರೆ | 28 | ಚಿಕ್ಕಜಾಜೂರು | 20 | ಹೊಳಲ್ಕೆರೆ |
| 14 | <u>ದಾವಣಗೆರೆ ಜಿಲ್ಲೆ</u> :<br>ದಾವಣಗೆರೆ | 29<br>30<br>31 | ಹೆಬ್ಬಾಳ<br>ಮಾಯಕೊಂಡ<br>ಹದಡಿ | 21 | ದಾವಣಗೆರೆ |
| 15 | ಜಗಳೂರು | | --- | 22 | ಜಗಳೂರು |
| 16 | ಹರಿಹರ | 32 | ಮಲೆಬೆನ್ನೂರು | 23 | ಹರಿಹರ |
| 17 | ಹೊನ್ನಾಳಿ | 33 | ನ್ಯಾಮತಿ | 24<br>25 | ಹೊನ್ನಾಳಿ<br>ನ್ಯಾಮತಿ |
| 18 | ಚನ್ನಗಿರಿ | 34<br>35<br>36 | ಬಸವಾಪಟ್ಟಣ<br>ಸಂತೆಬೆನ್ನೂರು<br>ನಲ್ಲೂರು | 26 | ಚನ್ನಗಿರಿ |
| 19 | <u>ಕೋಲಾರ ಜಿಲ್ಲೆ</u>:<br>ಕೋಲಾರ | 37 | ವೇಮಗಲ್ | 27 | ಕೋಲಾರ |
| 20 | ಮಾಲೂರು | | --- | 28 | ಮಾಲೂರು |
| 21 | ಬಂಗಾರಪೇಟೆ | | | 29 | ಬಂಗಾರಪೇಟೆ |
| 22 | ಮುಳಬಾಗಿಲು | 38<br>39 | ತಾಯಲೂರು<br>ಎನ್.ವಡ್ಡಹಳ್ಳಿ | 31 | ಮುಳಬಾಗಿಲು |
| 23 | ಶ್ರೀನಿವಾಸಪುರ | 40<br>41<br>42 | ಗೌನಿಪಲ್ಲಿ<br>ಯಲ್ದೂರು<br>ಸೋಮಯಾಜಲಹಳ್ಳಿ | 32 | ಶ್ರೀನಿವಾಸಪುರ |
| 24 | ಕೆ.ಜಿ.ಎಫ್. | 43<br>44 | ಬೇತಮಂಗಲ<br>ಎನ್.ಜಿ.ಹುಲ್ಕೂರು | | ಕೆ.ಜಿ.ಎಫ್. |
| 25 | <u>ಚಿಕ್ಕಬಳ್ಳಾಪುರ ಜಿಲ್ಲೆ</u>:<br>ಚಿಕ್ಕಬಳ್ಳಾಪುರ | 45<br>46<br>47 | ಪೆರೇಸಂದ್ರ<br>ಶಿಡ್ಲಘಟ್ಟ<br>ಮೇಲೂರು | 33<br>34 | ಚಿಕ್ಕಬಳ್ಳಾಪುರ<br>ಶಿಡ್ಲಘಟ್ಟ |
| 26 | ಗೌರಿಬಿದನೂರು | 48<br>49 | ಮಂಚೇನಹಳ್ಳಿ<br>ಕೋಟಾಲೂದಿನ್ನೆ | 35<br>36 | ಗೌರಿಬಿದನೂರು<br>ಮಂಚೇನಹಳ್ಳಿ |
| 27 | ಬಾಗೇಪಲ್ಲಿ | 50<br>51<br>52<br>53 | ಗುಡಿಬಂಡೆ<br>ಗೂಳೂರು<br>ಚೇಳೂರು<br>ಪರಗೋಡು | 37<br>38<br>39 | ಬಾಗೇಪಲ್ಲಿ<br>ಗುಡಿಬಂಡೆ<br>ಚೇಳೂರು |
| 28 | ಚಿಂತಾಮಣಿ | 54 | ಇರಗಂಪಲ್ಲಿ | 40 | ಚಿಂತಾಮಣಿ |

| | | | | | |
|---|---|---|---|---|---|
| 29 | ಶಿವಮೊಗ್ಗ ಜಿಲ್ಲೆ:<br>ಶಿವಮೊಗ್ಗ | 55<br>56<br>57 | ಮಲ್ಲಾಪುರ<br>ಆಯನೂರು<br>ಹೊಳಲೂರು | 41 | ಶಿವಮೊಗ್ಗ |
| 30 | ತೀರ್ಥಹಳ್ಳಿ | 58<br>59 | ಕೋಣಂದೂರು<br>ನೆರಟೂರು-ಹೊದಲ-ಅರಳಾಪುರ | 42 | ತೀರ್ಥಹಳ್ಳಿ |
| 31 | ಸಾಗರ | 60<br>61<br>62 | ತಾಳಗುಪ್ಪ<br>ಆನಂದಪುರ<br>ತುಮರಿ | 43 | ಸಾಗರ |
| 32 | ಸೊರಬ | 63<br>64<br>65<br>66 | ಹಳೆಸೊರಬ<br>ಆನವಟ್ಟಿ<br>ಜಡೆ<br>ಚಂದ್ರಗುತ್ತಿ | 44 | ಸೊರಬ |
| 33 | ಹೊಸನಗರ | 67 | ರಿಪ್ಪನ್‌ಪೇಟೆ | 45 | ಹೊಸನಗರ |
| 34 | ಶಿಕಾರಿಪುರ | 68<br>69 | ಶಿರಾಳಕೊಪ್ಪ<br>ತಡಗಣಿ | 46 | ಶಿಕಾರಿಪುರ |
| 35 | ಭದ್ರಾವತಿ | 70 | ಹೊಳೆಹೊನ್ನೂರು | 47 | ಭದ್ರಾವತಿ |
| 36 | ತುಮಕೂರು ಜಿಲ್ಲೆ:<br>ತುಮಕೂರು | 71<br>72<br>73<br>74 | ಕ್ಯಾತಸಂದ್ರ<br>ಹೆಬ್ಬೂರು<br>ಕೊರಟಗೆರೆ<br>ಅಕ್ಕಿರಾಮಪುರ | 48<br>49 | ತುಮಕೂರು<br>ಕೊರಟಗೆರೆ |
| 37 | ಗುಬ್ಬಿ | 75<br>76<br>77<br>78<br>79<br>80<br>81<br>82<br>83 | ಚೇಳೂರು<br>ಕೆ.ಜಿ.ಟೆಂಪಲ್<br>ಕೊಂಡ್ಲಿಕ್ರಾಸ್<br>ಎಂ.ಎನ್.ಕೋಟೆ<br>ನಿಟ್ಟೂರು<br>ಹೊಸಕೆರೆ<br>ಚಂದ್ರಶೇಖರಪುರ<br>ಕಡಬ<br>ಕಲ್ಲೂರು ಕ್ರಾಸ್ | 50 | ಗುಬ್ಬಿ |
| 38 | ಹುಳಿಯಾರು | 84<br>85 | ಚಿಕ್ಕನಾಯಕನಹಳ್ಳಿ<br>ಹಂದನಕೆರೆ | 51 | ಚಿಕ್ಕನಾಯಕನಹಳ್ಳಿ |
| 39 | ಕುಣಿಗಲ್ | 86<br>87 | ಅಮೃತೂರು<br>ಯಡಿಯೂರು | 52 | ಕುಣಿಗಲ್ |
| 40 | ಮಧುಗಿರಿ | 88<br>89<br>90<br>91 | ಬ್ಯಾಲ್ಯಾ<br>ಬಡವನಹಳ್ಳಿ<br>ಚಂದ್ರಾಬಾವಿ<br>ಹೊಸಕೆರೆ | 53 | ಮಧುಗಿರಿ |

| | | | | | |
|---|---|---|---|---|---|
| 41 | ಪಾವಗಡ | 92 | ವೈ.ಎನ್.ಹೊಸಕೋಟೆ | 54 | ಪಾವಗಡ |
| 42 | ಶಿರಾ | 93<br>94<br>95<br>96 | ಕಳ್ಳಂಬೆಳ್ಳ<br>ಬೆಂಚೆಬಸವನ<br>ಶೀಬಿ ಅಗ್ರಹಾರ<br>ಮಾನಂಗಿ | 55 | ಶಿರಾ |
| 43 | ತುರುವೇಕೆರೆ | 97<br>98<br>99<br>100 | ಸಂಪಿಗೆ<br>ಮಾಯಾಸಂದ್ರ<br>ದಂಡಿನಶಿವರ<br>ದಬ್ಬೇಘಟ್ಟ | 56 | ತುರುವೇಕೆರೆ |
| 44 | ತಿಪಟೂರು | 101<br>102<br>103<br>104 | ಕರಡಾಳ್<br>ಕೊನೇಹಳ್ಳಿ<br>ಬೆಳ್ಳೀಕೆರೆ<br>ಕಿಬ್ಬನಹಳ್ಳಿ | 57 | ತಿಪಟೂರು |

## ಮೈಸೂರು ವಿಭಾಗ

ಮುಖ್ಯ ಮಾರುಕಟ್ಟೆಗಳು : 42
ಉಪ ಮಾರುಕಟ್ಟೆಗಳು : 101

| ಕ್ರ. ಸಂ. | ಮುಖ್ಯ ಮಾರುಕಟ್ಟೆ ಹೆಸರು | ಕ್ರ. ಸಂ | ಉಪ ಮಾರುಕಟ್ಟೆಯ ಹೆಸರು | ಕ್ರ. ಸಂ | ಮಾರುಕಟ್ಟೆ ಕ್ಷೇತ್ರ ಒಳಗೊಳ್ಳುವ ತಾಲ್ಲೂಕುಗಳು |
|---|---|---|---|---|---|
| | **ಮೈಸೂರು ಜಿಲ್ಲೆ:** | | | | |
| 1 | ಮೈಸೂರು | 1 | ಕಡಕೋಳ | 58 | ಮೈಸೂರು |
| 2 | ಕೃಷ್ಣರಾಜನಗರ | 2 | ಸಾಲಿಗ್ರಾಮ | 59 | ಕೃಷ್ಣರಾಜನಗರ |
| | | 3 | ಹೆಬ್ಬಾಳು | 60 | ಸಾಲಿಗ್ರಾಮ |
| 3 | ಹುಣಸೂರು | 4 | ರತ್ನಪುರಿ | 61 | ಹುಣಸೂರು |
| 4 | ಪಿರಿಯಾಪಟ್ಟಣ | 5 | ಬೆಟ್ಟದಪುರ | 62 | ಪಿರಿಯಾಪಟ್ಟಣ |
| 5 | ಟಿ.ನರಸೀಪುರ | 6 | ಬನ್ನೂರು | 63 | ಟಿ.ನರಸೀಪುರ |
| 6 | ನಂಜನಗೂಡು | 7 | ಹುಲ್ಲಹಳ್ಳಿ | 64 | ನಂಜನಗೂಡು |
| 7 | ಸಂತೆಸರಗೂರು | | --- | 65 | ಸರಗೂರು |
| 8 | ಯರಹಳ್ಳಿ | 8 | ಹೆಚ್.ಡಿ.ಕೋಟೆ | 66 | ಹೆಚ್.ಡಿ.ಕೋಟೆ |
| | **ಚಾಮರಾಜನಗರ ಜಿಲ್ಲೆ:** | | | 67 | ಚಾಮರಾಜನಗರ |
| 9 | ಚಾಮರಾಜನಗರ | 9 | ಸಂತೆಮರಹಳ್ಳಿ | 68 | ಯಳಂದೂರು |
| 10 | ಗುಂಡ್ಲುಪೇಟೆ | 1011 | ತೆರಕಣಾಂಬಿ<br>ಬೇಗೂರು | 69 | ಗುಂಡ್ಲುಪೇಟೆ |
| 11 | ಕೊಳ್ಳೇಗಾಲ | | --- | 70 | ಕೊಳ್ಳೇಗಾಲ |
| 12 | ಹನೂರು | 12 | ಒಡೆಯರಪಾಳ್ಯ | 71 | ಹನೂರು |
| | **ದಕ್ಷಿಣಕನ್ನಡ ಜಿಲ್ಲೆ:** | | | 72 | ಮಂಗಳೂರು |
| 13 | ಮಂಗಳೂರು | 13 | ಮೂಡಬಿದ್ರಿ | 73 | ಮೂಡಬಿದ್ರಿ |
| | | | | 74 | ಉಲ್ಲಾಳ |
| | | | | 75 | ಮುಲ್ಕಿ |
| 14 | ಭಂಟ್ವಾಳ | 14 | ವಿಟ್ಲ | 76 | ಭಂಟ್ವಾಳ |
| | | 15 | ಮಾಣಿ | | |
| | | 16 | ಗೋಳ್ತಮಜಲು | | |
| | | 17 | ಕನ್ಯಾನ | | |
| | | 18 | ಕೊಳ್ನಾಡು | | |
| | | 19 | ನರಿಕೊಂಬು | | |
| | | 20 | ಮಂಚಿ-ಕುಕ್ಕಾಜೆ | | |
| | | 21 | ಕುರ್ನಾಡು | | |
| | | 22 | ಪಿಲಾತಬೆಟ್ಟು | | |
| | | 23 | ಬಾಳೆಪುಣಿ | | |
| | | 24 | ನರಿಂಗಾನ | | |
| | | 25 | ಚೆನ್ನೈತೋಡಿ | | |

| | | | | | |
|---|---|---|---|---|---|
| 15 | ಪುತ್ತೂರು | 26<br>27<br>28<br>29<br>30<br>31<br>32<br>33 | ಉಪ್ಪಿನಂಗಡಿ<br>ನಕ್ಕಿಲಾಡಿ<br>ಕಡಬ<br>ಕೋಡಿಂಬಾಳ<br>ನೆಲ್ಯಾಡಿ<br>ಕಾಣಿಯೂರು<br>ಈಶ್ವರಮಂಗಲ<br>ಪಾಣಾಜೆ | 77<br>78 | ಪುತ್ತೂರು<br>ಕಡಬ |
| 16 | ಸುಳ್ಯ | | -- | 79 | ಸುಳ್ಯ |
| 17 | ಬೆಳ್ತಂಗಡಿ | 34<br>35<br>36<br>37<br>38<br>39<br>40<br>41 | ಕೊಕ್ಕಡ<br>ವೇಣೂರು<br>ಮಡಂತ್ಯಾರು<br>ನಾರಾವಿ<br>ಅಳದಂಗಡಿ<br>ಕರಾಯ-ಕಲ್ಲೇರಿ<br>ಉಜಿರೆ<br>ಕಕ್ಕಿಂಜೆ | 80 | ಬೆಳ್ತಂಗಡಿ |
| <br>18 | <u>ಉಡುಪಿ ಜಿಲ್ಲೆ:</u><br>ಉಡುಪಿ | 42<br>43 | ಶಿವಳ್ಳಿ<br>ಕೋಟಾ | 81<br>82<br>83 | ಉಡುಪಿ<br>ಬ್ರಹ್ಮಾವರ<br>ಕಾಪು |
| 19 | ಕುಂದಾಪುರ | | -- | 84<br>85 | ಕುಂದಾಪುರ<br>ಬೈಂದೂರು |
| 20 | ಕಾರ್ಕಳ | 44<br>45<br>46 | ಶಿವಪುರ<br>ಕುಚ್ಚೂರು<br>ಹೆಬ್ರಿ | 86<br>87 | ಕಾರ್ಕಳ<br>ಹೆಬ್ರಿ |
| <br>21 | <u>ಕೊಡಗು ಜಿಲ್ಲೆ</u><br>ಮಡಿಕೇರಿ | | <br>-- | <br>88 | <br>ಮಡಿಕೇರಿ |
| 22 | ಸೋಮವಾರಪೇಟೆ<br>(ಕೇಂದ್ರಸ್ಥಾನ<br>ಕುಶಾಲನಗರ) | 47<br>48<br>49 | ಸೋಮವಾರಪೇಟೆ<br>ಶನಿವಾರ ಸಂತೆ<br>ಶುಂಠಿಕೊಪ್ಪ | 89<br>90 | ಸೋಮವಾರಪೇಟೆ<br>ಕುಶಾಲನಗರ |
| 23 | ಗೋಣಿಕೊಪ್ಪಲ್ | 50 | ಮಾಕುಟ್ಟ | 91<br>92 | ವಿರಾಜಪೇಟೆ<br>ಪೊನ್ನಂಪೇಟೆ |
| <br>24 | <u>ಚಿಕ್ಕಮಗಳೂರು ಜಿಲ್ಲೆ:</u><br>ಚಿಕ್ಕಮಗಳೂರು | | <br>-- | <br>93 | <br>ಚಿಕ್ಕಮಗಳೂರು |
| 25 | ಕಡೂರು | 51<br>52<br>53<br>54<br>55<br>56 | ಪಂಚನಹಳ್ಳಿ<br>ಬೀರೂರು<br>ಅಂತರಗಟ್ಟೆ<br>ಯರಗಟ್ಟಿ<br>ಸಿಂಗಟ್ಟಗೆರೆ<br>ಹಿರೇನಲ್ಲೂರು | 94 | ಕಡೂರು |

| | | | | | |
|---|---|---|---|---|---|
| 26 | ತರೀಕೆರೆ | 57<br>58 | ಶಿವನಿ<br>ಅಜ್ಜಂಪುರ | 95<br>96 | ತರೀಕೆರೆ<br>ಅಜ್ಜಂಪುರ |
| 27 | ಮೂಡಿಗೆರೆ | | | 97<br>98 | ಮೂಡಿಗೆರೆ<br>ಕಳಸ |
| 28 | ಕೊಪ್ಪ | 59 | ಶೃಂಗೇರಿ | 99<br>100<br>101 | ಕೊಪ್ಪ<br>ಶೃಂಗೇರಿ<br>ಎನ್.ಆರ್.ಪುರ |
| | | 60 | ಎನ್.ಆರ್.ಪುರ | | |
| 29 | ಹಾಸನ ಜಿಲ್ಲೆ:<br>ಹಾಸನ | 61<br>62<br>63 | ದುದ್ದ<br>ಆಲೂರು<br>ಮೊಸಳೆಹೊಸಹಳ್ಳಿ | 102<br>103 | ಹಾಸನ<br>ಆಲೂರು |
| 30 | ಬೇಲೂರು | 64<br>65 | ಹನಿಕೆ<br>ಹಳೇಬೀಡು | 104 | ಬೇಲೂರು |
| 31 | ಅರಸೀಕೆರೆ | 66<br>67<br>68<br>69<br>70<br>71 | ದೊಡ್ಡಮೇಟಿಕುರ್ಕೆ<br>ಜಾವಗಲ್<br>ಗಂಡಸಿ<br>ಬಾಣಾವಾರ<br>ಜೆ.ಸಿ.ಪುರ<br>ಹಬ್ಬನಘಟ್ಟ ಕಾವಲು | 105 | ಅರಸೀಕೆರೆ |
| 32 | ಹೊಳೆನರಸೀಪುರ | 72<br>73 | ದೊಡ್ಡಹಳ್ಳಿ<br>ಕೋಣನೂರು | 106 | ಹೊಳೆನರಸೀಪುರ |
| 33 | ಅರಕಲಗೂಡು | 74 | ಮಲ್ಲಿಪಟ್ಟಣ | 107 | ಅರಕಲಗೂಡು |
| 34 | ಚನ್ನರಾಯಪಟ್ಟಣ | 75<br>76<br>77<br>78 | ದಿಡಿಗ<br>ಬುಟ್ಟನಹಳ್ಳಿ<br>ನುಗ್ಗೇಹಳ್ಳಿ<br>ಶ್ರವಣಬೆಳಗೊಳ | 108 | ಚನ್ನರಾಯಪಟ್ಟಣ |
| 35 | ಸಕಲೇಶಪುರ | 79 | ಬಾಳುಪೇಟೆ | 109 | ಸಕಲೇಶಪುರ |
| 36 | ಮಂಡ್ಯ ಜಿಲ್ಲೆ:<br>ಮಂಡ್ಯ | 80<br>81 | ಕೊಮ್ಮೇರಹಳ್ಳಿ<br>ಸುಂಡಹಳ್ಳಿ | 110 | ಮಂಡ್ಯ |
| 37 | ಶ್ರೀರಂಗಪಟ್ಟಣ | 82<br>83<br>84<br>85<br>86<br>87<br>88<br>89 | ಪಿ.ಹೊಸಹಳ್ಳಿ<br>ಬೆಳಗೊಳ<br>ನಗುವನಹಳ್ಳಿ<br>ದರಸಗುಪ್ಪೆ<br>ಬಲ್ಲೇನಹಳ್ಳಿ<br>ಕೂಡಲಕುಪ್ಪೆ<br>ಕಿರಂಗೂರು–ಬಾಬುರಾಯನಕೊಪ್ಪಲು<br>ಶಾಂತಿಕೊಪ್ಪಲು | 111 | ಶ್ರೀರಂಗಪಟ್ಟಣ |

| | | | | | |
|---|---|---|---|---|---|
| 38 | ಮದ್ದೂರು | 90<br>91<br>92 | ನಿಡಗಟ್ಟ<br>ಭಾರತಿನಗರ<br>ಗುಡಿಗೆರೆ | 112 | ಮದ್ದೂರು |
| 39 | ಮಳವಳ್ಳಿ | 939<br>4 | ಕಿರುಗಾವಲು<br>ಬೆಳಕವಾಡಿ | 113 | ಮಳವಳ್ಳಿ |
| 40 | ಕೆ.ಆರ್.ಪೇಟೆ | 95<br>96<br>97<br>98 | ಕಿಕ್ಕೇರಿ<br>ಸಂತೆಬಾಚನಹಳ್ಳಿ<br>ಬಲ್ಲೇನಹಳ್ಳಿ<br>ಗಂಗೇನಹಳ್ಳಿ | 114 | ಕೆ.ಆರ್.ಪೇಟೆ |
| 41 | ನಾಗಮಂಗಲ | 99<br>100<br>101 | ಕದಬಳ್ಳಿ<br>ಬೆಂಡಿಗನವಿಲೆ<br>ಬೆಳ್ಳೂರು | 115 | ನಾಗಮಂಗಲ |
| 42 | ಪಾಂಡವಪುರ | | | 116 | ಪಾಂಡವಪುರ |

# ಬೆಳಗಾವಿ ವಿಭಾಗ

ಮುಖ್ಯ ಮಾರುಕಟ್ಟೆಗಳು : 48
ಉಪ ಮಾರುಕಟ್ಟೆಗಳು : 136

| ಕ್ರ. ಸಂ | ಮುಖ್ಯ ಮಾರುಕಟ್ಟೆ ಹೆಸರು | ಕ್ರ. ಸಂ. | ಉಪ ಮಾರುಕಟ್ಟೆಯ ಹೆಸರು | ಕ್ರ. ಸಂ. | ಮಾರುಕಟ್ಟೆ ಕ್ಷೇತ್ರ ಒಳಗೊಳ್ಳುವ ತಾಲ್ಲೂಕುಗಳು |
|---|---|---|---|---|---|
| | ಬೆಳಗಾವಿ ಜಿಲ್ಲೆ: | | | | |
| 1 | ಬೆಳಗಾವಿ | 1 | ಹಿರೇಬಾಗೇವಾಡಿ | 117 | ಬೆಳಗಾವಿ |
| 2 | ಬೈಲಹೊಂಗಲ | 2 | ಕಿತ್ತೂರು | 118 | ಬೈಲಹೊಂಗಲ |
| | | 3 | ನೇಸರ್ಗಿ | 119 | ಕಿತ್ತೂರು |
| | | 4 | ದೊಡ್ಡವಾಡ | | |
| | | 5 | ಬೆಳವಡಿ | | |
| | | 6 | ಎಂ.ಕೆ.ಹುಬ್ಬಳ್ಳಿ | | |
| 3 | ಅಥಣಿ | 7 | ಕಾಗವಾಡ | 120 | ಅಥಣಿ |
| | | | | 121 | ಕಾಗವಾಡ |
| 4 | ಗೋಕಾಕ್ | 8 | ಘಟಪ್ರಭ | 42 | ಗೋಕಾಕ್ |
| | | 9 | ಅಂಕಲಗಿ | 2 | ಮೂಡಲಗಿ |
| | | 10 | ಮೂಡಲಗಿ | 123 | |
| | | 11 | ಯಾದವಾಡ | | |
| 5 | ಕುಡಚಿ | 12 | ಹಾರೋಗೇರಿ | 124 | ರಾಯಭಾಗ್ |
| | | 13 | ರಾಯಭಾಗ್ | | |
| | | 14 | ಕಂಕಣವಾಡಿ | | |
| 6 | ನಂದಗಡ | 15 | ಬಿಡಿ | 125 | ಖಾನಾಪುರ |
| | | 16 | ಇಟಗಿ | | |
| | | 17 | ಖಾನಾಪುರ | | |
| | | 18 | ಹಲಸಗಿ | | |
| | | 19 | ಕಸಬ ನಂದಗಡ | | |
| 7 | ನಿಪ್ಪಾಣಿ | 20 | ಚಿಕ್ಕೋಡಿ | 126 | ಚಿಕ್ಕೋಡಿ |
| | | 21 | ಸಡಲಗಾ | 127 | ನಿಪ್ಪಾಣಿ |
| | | 22 | ಎಕ್ಸಂಬಾ | | |
| 8 | ರಾಮದುರ್ಗ | 23 | ಕಟಕೋಳ | 128 | ರಾಮದುರ್ಗ |
| | | 24 | ಹುಲಗುಂದ | | |
| | | 25 | ಸುರೇಬಾನ್ | | |
| 9 | ಸೌದತ್ತಿ | 26 | ಮುರಗೋಡ್ | 129 | ಸೌದತ್ತಿ |
| | | 27 | ಮುನವಳ್ಳಿ | | |
| | | 28 | ಉಗರಗೋಳ | | |
| 10 | ಯರಗಟ್ಟಿ | 29 | ಶಿವಪುರ | 130 | ಯರಗಟ್ಟಿ |
| 11 | ಸಂಕೇಶ್ವರ | 30 | ಬೆಲ್ಲದಬಾಗೇವಾಡಿ | 131 | ಹುಕ್ಕೇರಿ |
| | | 31 | ಪಾಶ್ಚಾಪುರ | | |

| | | | | | |
|---|---|---|---|---|---|
| | | 32<br>33<br>34<br>35 | ಹುಕ್ಕೇರಿ<br>ಯಮಕನಮರಡಿ<br>ದೊಡ್ಡಿರಾಮೇವಾಡಿ<br>ಹೆಬ್ಬಾಳ | | |
| 12 | <u>ವಿಜಯಪುರ ಜಿಲ್ಲೆ:</u><br>ವಿಜಯಪುರ | 36<br>37<br>38<br>39<br>40<br>41<br>42<br>43<br>44<br>45 | ಬಸವನಬಾಗೇವಾಡಿ<br>ಗೊಳಸಂಗಿ<br>ಹೂವಿನಹಿಪ್ಪರಗಿ<br>ತಿಕೋಟ<br>ಬಬಲೇಶ್ವರ<br>ತಿಡಗುಂಡಿ<br>ನಿಡಗುಂದಿ<br>ಕೊಲ್ಹಾರ<br>ಕೂಡಗಿ<br>ಉಪ್ಪಲದಿನ್ನಿ | 132<br>133<br>134<br>135<br>136<br>137 | ವಿಜಯಪುರ<br>ಬಸವನಬಾಗೇವಾಡಿ<br>ಕೊಲ್ಹಾರ<br>ನಿಡಗುಂದಿ<br>ಬಬಲೇಶ್ವರ<br>ತಿಕೋಟ |
| 13 | ಸಿಂಧಗಿ | 46 | ದೇವರಹಿಪ್ಪರಗಿ | 138<br>139 | ಸಿಂಧಗಿ<br>ದೇವರಹಿಪ್ಪರಗಿ |
| 14 | ಅಲಮೇಲ | 47 | ಮೊರಟಗಿ | 140 | ಅಲಮೇಲ |
| 15 | ಇಂಡಿ | 48 | ಚಡಚಣ | 141<br>142 | ಇಂಡಿ<br>ಚಡಚಣ |
| 16 | ತಾಳಕೋಟೆ | 49<br>50 | ಮುದ್ದೇಬಿಹಾಳ<br>ನಾಲತ್‌ವಾಡ್ | 143<br>144 | ಮುದ್ದೇಬಿಹಾಳ<br>ತಾಳಕೋಟೆ |
| 17 | <u>ಬಾಗಲಕೋಟೆ ಜಿಲ್ಲೆ:</u><br>ಬಾಗಲಕೋಟೆ | 51 | ಕಲಾದಗಿ | 145 | ಬಾಗಲಕೋಟೆ |
| 18 | ಬೀಳಗಿ | 52 | ಗಲಗಲಿ | 146 | ಬೀಳಗಿ |
| 19 | ಬಾದಾಮಿ | 53<br>54<br>55<br>56<br>57 | ಕುಲಗೇರಿ ಕ್ರಾಸ್<br>ಕೆರೂರು<br>ಜಾಲಿಹಾಳ<br>ನಂದಿಕೇಶ್ವರ<br>ಗುಳೇದಗುಡ್ಡ | 147<br>148 | ಬಾದಾಮಿ<br>ಗುಳೇದಗುಡ್ಡ |
| 20 | ಹುನಗುಂದ | 58<br>59<br>60 | ಇಳಕಲ್<br>ಅಮೀನಗಡ<br>ಗುಡೂರು | 149<br>150 | ಹುನಗುಂದ<br>ಇಳಕಲ್ |
| 21 | ಜಮಖಂಡಿ | 61 | ಸಾವಳಗಿ | 151 | ಜಮಖಂಡಿ |

| | | | | | |
|---|---|---|---|---|---|
| 22 | ಮಹಾಲಿಂಗಪುರ | 62 | ತೇರದಾಳ | 152 | ರಬಕವಿ-ಬನಹಟ್ಟಿ |
| 23 | ಮುಧೋಳ | 63 | ಲೋಕಾಪುರ | 153 | ಮುಧೋಳ |
| 24 | ಧಾರವಾಡ ಜಿಲ್ಲೆ:<br>ಧಾರವಾಡ | 64<br>65 | ಅಳ್ನಾವರ<br>ಖಾನಾಪುರ-<br>ಶೇಡಬಾಳ | 154<br>155 | ಧಾರವಾಡ<br>ಅಳ್ನಾವರ |
| 25 | ಅಣ್ಣಿಗೇರಿ | 66<br>67<br>68<br>69<br>70 | ನವಲಗುಂದ<br>ಮೊರಬ<br>ಅಳಗವಾಡಿ<br>ಹೆಬ್ಬಾಳ<br>ಶಲವಡಿ | 156<br>157 | ನವಲಗುಂದ<br>ಅಣ್ಣಿಗೇರಿ |
| 26 | ಹುಬ್ಬಳ್ಳಿ | 71<br>72<br>73 | ನೂಲ್ವಿ<br>ಹೆಬಸೂರು<br>ಶಿರಗುಪ್ಪಿ | 158<br>159 | ಹುಬ್ಬಳ್ಳಿ<br>ಹುಬ್ಬಳ್ಳಿ ನಗರ |
| 27 | ಕುಂದಗೋಳ | 74=<br>75 | ಗುಡಿಗೇರಿ<br>ಸಂಶಿ | 160 | ಕುಂದಗೋಳ |
| 28 | ಕಲಘಟಗಿ | | – | 161 | ಕಲಘಟಗಿ |
| 29 | ಗದಗ ಜಿಲ್ಲೆ:<br>ಗದಗ | <br>76<br>77<br>78<br>79<br>80<br>81 | <br>ಹುಲಕೋಟಿ<br>ಮುಳಗುಂದ<br>ಕುರ್ತಕೋಟಿ<br>ಹೊಂಬಳ<br>ಕೊಟವುಮಚಗಿ<br>ಸೊರಟೂರು | <br>162 | <br>ಗದಗ |
| 30 | ಮುಂಡರಗಿ | 82 | ಡಂಬಳ | 163 | ಮುಂಡರಗಿ |
| 31 | ನರಗುಂದ | 83<br>84<br>85 | ಶಿರೋಳ<br>ಕೋಣನೂರು<br>ಚಿಕ್ಕನರಗುಂದ | 164 | ನರಗುಂದ |
| 32 | ರೋಣ<br>(ಕೇಂದ್ರಸ್ಥಾನ<br>ಹೊಳೆಆಲೂರು) | 86<br>87<br>88<br>89 | ನರೇಗಲ್<br>ಗಜೇಂದ್ರಗಡ<br>ರೋಣ<br>ಸೂಡಿ | 165<br>166 | ರೋಣ<br>ಗಜೇಂದ್ರಗಡ |
| 33 | ಲಕ್ಷ್ಮೇಶ್ವರ | 90<br>91<br>92 | ಶಿರಹಟ್ಟಿ<br>ಶಿಗಳ<br>ಬೆಳ್ಳಟ್ಟಿ | 167<br>168 | ಶಿರಹಟ್ಟಿ<br>ಲಕ್ಷ್ಮೇಶ್ವರ |
| 34 | ಹಾವೇರಿ ಜಿಲ್ಲೆ:<br>ಹಾವೇರಿ | <br>93<br>94 | <br>ಗುತ್ತಲ್<br>ಕರಜಗಿ | <br>169 | <br>ಹಾವೇರಿ |

| | | | | | |
|---|---|---|---|---|---|
| 35 | ಹಿರೇಕರೂರು | 95<br>96<br>97 | ಹಂಸಭಾವಿ<br>ಮಾಸೂರು<br>ರಟ್ಟಿಹಳ್ಳಿ | 170<br>171 | ಹಿರೇಕರೂರು<br>ರಟ್ಟಿಹಳ್ಳಿ |
| 36 | ರಾಣೆಬೆನ್ನೂರು | 98<br>99<br>100 | ಹಲಗೇರಿ<br>ತುಮ್ಮಿನಕಟ್ಟಿ<br>ಕೂನಬೇವು-<br>ಹೂಲಿಹಳ್ಳಿ | 172 | ರಾಣೆಬೆನ್ನೂರು |
| 37 | ಬ್ಯಾಡಗಿ | 101<br>102<br>103 | ಚಿಕ್ಕಬಾಸೂರು<br>ಮೋಟೆಬೆನ್ನೂರು<br>ಚಿಕ್ಕಣಜಿ | 173 | ಬ್ಯಾಡಗಿ |
| 38 | ಸವಣೂರು | 104<br>105 | ಯಲವಿ<br>ಕಡೆಕೋಳ | 174 | ಸವಣೂರು |
| 39 | ಹಾನಗಲ್ | 106 | ಅಕ್ಕಿಆಲೂರು | 175 | ಹಾನಗಲ್ |
| 40 | ಶಿಗ್ಗಾಂವ್ | | -- | 176 | ಶಿಗ್ಗಾಂವ್ |
| 41 | <u>ಉತ್ತರಕನ್ನಡ ಜಿಲ್ಲೆ:</u><br>ಹಳಿಯಾಳ | 107 | ದಾಂಡೇಲಿ | 177<br>178<br>179 | ಹಳಿಯಾಳ<br>ಸೂಪ<br>ದಾಂಡೇಲಿ |
| 42 | ಕುಮಟಾ | 108<br>109<br>110 | ಗೋಕರ್ಣ<br>ಕತಗಾಲ<br>ಮೂರೂರು | 180 | ಕುಮಟಾ |
| 43 | ಹೊನ್ನಾವರ | 111<br>112<br>113 | ಭಟ್ಕಳ<br>ಬಿಳಲಖಂಡ<br>ಇಡಗುಂಜಿ | 181<br>182 | ಹೊನ್ನಾವರ<br>ಭಟ್ಕಳ |
| 44 | ಸಿದ್ದಾಪುರ | 114<br>115<br>116 | ಅನಲೆಬೈಲ್<br>ತೆರೆಹಳ್ಳಿಕನ್ಸೂರ್<br>ಮನ್‌ಮನೆ | 183 | ಸಿದ್ದಾಪುರ |
| 45 | ಯಲ್ಲಾಪುರ | 117<br>118<br>119 | ಕಿರುವತ್ತಿ<br>ಉಮ್ಮಚಗಿ<br>ಗುಳ್ಳಾಪುರ | 184 | ಯಲ್ಲಾಪುರ |
| 46 | ಶಿರಸಿ | 120<br>121<br>122<br>123<br>124<br>125<br>126<br>127 | ಬಿಸಿಲಕೊಪ್ಪ<br>ಯಡಹಳ್ಳಿ<br>ಬನವಾಸಿ<br>ದಾಸನಕೊಪ್ಪ<br>ಚಿಪಗಿ<br>ನೀರ್ನಳ್ಳಿ<br>ನೆಗ್ಗು<br>ಶಿವಗಾಂವ | 185 | ಶಿರಸಿ |

| | | | | | |
|---|---|---|---|---|---|
| | | 128 | ಶಿಂಗೆಹಳ್ಳಿ<br>ಸಾಲ್ಕಣಿ<br>ಹಲಗದ್ದೆ<br>ದೊಡ್ನಳ್ಳಿ<br>ಬೆಣಗಾಂವ<br>ಅಂಡಗಿ<br>ಕೊಡನಗದ್ದೆ | | |
| | | 129 | | | |
| | | 130 | | | |
| | | 131 | | | |
| | | 132 | | | |
| | | 133 | | | |
| | | 134 | | | |
| 47 | ಮುಂಡಗೋಡ | | -- | 186 | ಮುಂಡಗೋಡ |
| 48 | ಕಾರವಾರ | 135 | ಕದ್ರಾ | 187 | ಕಾರವಾರ |
| | | 136 | ಅಂಕೋಲ | 188 | ಅಂಕೋಲ |

## ಕಲಬುರಗಿ ವಿಭಾಗ

ಮುಖ್ಯ ಮಾರುಕಟ್ಟೆಗಳು : 37
ಉಪ ಮಾರುಕಟ್ಟೆಗಳು : 71

| ಕ್ರ. ಸಂ | ಮುಖ್ಯ ಮಾರುಕಟ್ಟೆ ಹೆಸರು | ಕ್ರ. ಸಂ | ಉಪ ಮಾರುಕಟ್ಟೆಯ ಹೆಸರು | ಕ್ರ. ಸಂ. | ಮಾರುಕಟ್ಟೆ ಕ್ಷೇತ್ರ ಒಳಗೊಳ್ಳುವ ತಾಲ್ಲೂಕುಗಳು |
|---|---|---|---|---|---|
| 1 | ಕಲಬುರಗಿ ಜಿಲ್ಲೆ:<br>ಕಲಬುರಗಿ | 1<br>2<br>3<br>4 | ಕಮಲಾಪುರ<br>ದೇವರಗಾಣಗಾಪುರ<br>ಕರಜಗಿ<br>ಅಫಜಲಪುರ | 189<br>190<br>191 | ಕಲಬುರಗಿ<br>ಕಮಲಾಪುರ<br>ಅಫಜಲಪುರ |
| 2 | ಆಳಂದ | 5 | ಮಾದನಹಿಪ್ಪರಗ | 192 | ಆಳಂದ |
| 3 | ಜೇವರ್ಗಿ | 6 | ಯಡ್ರಾಮಿ | 193<br>194 | ಜೇವರ್ಗಿ<br>ಯಡ್ರಾಮಿ |
| 4 | ಚಿತ್ತಾಪುರ | 7<br>8<br>9<br>10<br>11 | ನಲ್ವಾರ<br>ಶಹಾಬಾದ್<br>ವಾಡಿ<br>ಕಲ್ಲೂರು<br>ಕಾಳಗಿ | 195<br>196<br>197 | ಚಿತ್ತಾಪುರ<br>ಶಹಾಬಾದ್<br>ಕಾಳಗಿ |
| 5 | ಸೇಡಂ | 12<br>13 | ಮಳಖೇಡ<br>ಮುಧೋಳ | 198 | ಸೇಡಂ |
| 6 | ಚಿಂಚೋಳಿ | 14 | ಸುಲೇಪೇಟೆ | 199 | ಚಿಂಚೋಳಿ |
| 7 | ಯಾದಗಿರಿ ಜಿಲ್ಲೆ<br>ಯಾದಗಿರಿ | 15<br>16 | ಗುರುಮಿಟ್ಕಲ್<br>ಸೈದಾಪುರ | 200<br>201 | ಯಾದಗಿರಿ<br>ಗುರುಮಿಟ್ಕಲ್ |
| 8 | ಶಹಾಪುರ | 17<br>18<br>19 | ಗೋಗಿ<br>ಸಗರ<br>ವಡಗೇರ | 202<br>203 | ಶಹಾಪುರ<br>ವಡಗೇರ |
| 9 | ಸುರಪುರ | 20<br>21<br>22 | ಹುಣಸಗಿ<br>ಕೆಂಬಾವಿ<br>ಖಾನಾಪುರ | 204<br>205 | ಸುರಪುರ<br>ಹುಣಸಗಿ |
| 10 | ಬಳ್ಳಾರಿ ಜಿಲ್ಲೆ:<br>ಬಳ್ಳಾರಿ | 23<br>24<br>25 | ಮೋಕ<br>ಕುಡಿತಿನಿ<br>ಕುರುಗೋಡು | 206<br>207 | ಬಳ್ಳಾರಿ<br>ಕುರುಗೋಡು |
| 11 | ಸಂಡೂರು | --- | --- | 208 | ಸಂಡೂರು |
| 12 | ಕಂಪ್ಲಿ | | --- | 209 | ಕಂಪ್ಲಿ |
| 13 | ಸಿರುಗುಪ್ಪ | 26<br>27<br>28<br>29 | ತೆಕ್ಕಲಕೋಟೆ<br>ಕೆರೂರು<br>ಸಿರಿಗೆರೆ<br>ಹಚ್ಚೊಳ್ಳಿ | 210 | ಸಿರುಗುಪ್ಪ |

| | | | | | |
|---|---|---|---|---|---|
| 14 | ವಿಜಯನಗರ ಜಿಲ್ಲೆ:<br>ಹೊಸಪೇಟೆ | 30 | ಮರಿಯಮ್ಮನಹಳ್ಳಿ | 211 | ಹೊಸಪೇಟೆ |
| 15 | ಹರಪನಹಳ್ಳಿ | 31<br>32<br>33 | ತೆಲಗಿ<br>ಅರಸೀಕೆರೆ<br>ನಿಚ್ಚಾಪುರ | 212 | ಹರಪನಹಳ್ಳಿ |
| 16 | ಕೊಟ್ಟೂರು | | --- | 213 | ಕೊಟ್ಟೂರು |
| 17 | ಕೂಡ್ಲಿಗಿ | 34 | ಚಿಕ್ಕಜೋಗಿಹಳ್ಳಿ | 214 | ಕೂಡ್ಲಿಗಿ |
| 18 | ಹೆಚ್.ಬಿ.ಹಳ್ಳಿ | 35<br>36 | ತಂಬ್ರಹಳ್ಳಿ<br>ಹನಸಿ | 215 | ಹೆಚ್.ಬಿ.ಹಳ್ಳಿ |
| 19 | ಹೂವಿನಹಡಗಲಿ | 37 | ಹೊಳಲು | 216 | ಹೂವಿನಹಡಗಲಿ |
| 20 | ಬೀದರ್ ಜಿಲ್ಲೆ:<br>ಬೀದರ್ | 38 | ಮುನ್ನೋಳಿ | 217 | ಬೀದರ್ |
| 21 | ಹುಮನಾಬಾದ್ | 39<br>40<br>41 | ಚಿಟಗುಪ್ಪ<br>ದುಬ್ಬಲಗುಂಡಿ<br>ಹಳಿಖೇಡ | 218<br>219 | ಹುಮನಾಬಾದ್<br>ಚಿಟಗುಪ್ಪ |
| 22 | ಬಸವಕಲ್ಯಾಣ | 42 | ಹುಲಸೂರು | 220<br>221 | ಬಸವಕಲ್ಯಾಣ<br>ಹುಲಸೂರು |
| 23 | ಭಾಲ್ಕಿ | 43 | ಖಾನಾಪುರ | 222 | ಭಾಲ್ಕಿ |
| 24 | ಔರಾದ್ | 44<br>45<br>46 | ಕಮಲ್‌ನಗರ<br>ಜಂಬಗಿ<br>ಠಾಣಾಕುಸ್ನೂರ್ | 223<br>224 | ಔರಾದ್<br>ಕಮಲ್‌ನಗರ |
| 25 | ರಾಯಚೂರು ಜಿಲ್ಲೆ:<br>ರಾಯಚೂರು | – | --- | 225 | ರಾಯಚೂರು |
| 26 | ದೇವದುರ್ಗ | 47 | ಜಾಲಹಳ್ಳಿ | 226<br>227 | ದೇವದುರ್ಗ<br>ಅರಕೇರಾ |
| 27 | ಲಿಂಗಸೂಗೂರು | 48<br>49 | ಮುದಗಲ್<br>ಹಟ್ಟಿ | 228 | ಲಿಂಗಸೂಗೂರು |
| 28 | ಮಸ್ಕಿ | - | - | - | ಮಸ್ಕಿ |
| 29 | ಮಾನ್ವಿ | 50<br>51<br>55<br>53 | ಸಿರವಾರ<br>ಕಲ್ಲೂರು<br>ಕವಿತಾಳ<br>ಹಾಲಪುರ | 230<br>231 | ಮಾನ್ವಿ<br>ಸಿರವಾರ |
| 30 | ಸಿಂಧನೂರು | 54<br>55<br>56<br>57 | ತುರುವಿಹಾಳ<br>ಬಳಗಾನೂರು<br>ಜಾವಳಗೆರೆ<br>ಆರ್.ಹೆಚ್.ಕ್ಯಾಂಪ್ (ಪುನರ್ ವಸತಿ ಕೇಂದ್ರ) | 232 | ಸಿಂಧನೂರು |

| | | | | | |
|---|---|---|---|---|---|
| 31 | <u>ಕೊಪ್ಪಳ ಜಿಲ್ಲೆ:</u><br>ಕೊಪ್ಪಳ | 58<br>59<br>60<br>61<br>62 | ಗಿಣಿಗೇರಿ<br>ಅಲವಂಡಿ<br>ಕುಕನಪಲ್ಲಿ<br>ಕಿನ್ನಾಳ<br>ಬೂದಗುಂಪ | 233 | ಕೊಪ್ಪಳ |
| 32 | ಗಂಗಾವತಿ | 63 | ಶ್ರೀರಾಮನಗರ | 234 | ಗಂಗಾವತಿ |
| 33 | ಕನಕಗಿರಿ | 64 | ಸಿದ್ದಾಪುರ | 235<br>236 | ಕನಕಗಿರಿ<br>ಕಾರಟಗಿ<br>91 ಉತ್ಪನ್ನಗಳಿಗೆ<br>(ಭತ್ತ ಮತ್ತು ಅಕ್ಕಿ<br>ಹೊರತುಪಡಿಸಿ) |
| 34 | ಭತ್ತ ಮತ್ತು ಅಕ್ಕಿ ವಿಶೇಷ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ ಕಾರಟಗಿ | | -- | | ಕನಕಗಿರಿ<br>ಕಾರಟಗಿ<br>(ಭತ್ತ ಮತ್ತು ಅಕ್ಕಿ<br>ಉತ್ಪನ್ನಗಳಿಗೆ) |
| 35 | ಯಲ್ಬುರ್ಗಾ<br>(ಕೇಂದ್ರಸ್ಥಾನ –<br>ಕೂಕನೂರು) | 65<br>66<br>67<br>68<br>69 | ಬಾಣಾಪುರ<br>ಯಲ್ಬುರ್ಗಾ<br>ತಳಕಲ್<br>ಬೇವೂರು<br>ಮಟಗಮರಿ | 237<br>238 | ಯಲ್ಬುರ್ಗಾ<br>ಕೂಕನೂರು |
| 36 | ಕುಷ್ಟಗಿ | 7<br>71 | ತಾವರಗೇರ<br>ಹನುಮಸಾಗರ | 239 | ಕುಷ್ಟಗಿ |

<u>ಸಂಕ್ಷಿಪ್ತ</u>

| ಕ್ರಮ ಸಂಖ್ಯೆ | ವಿಭಾಗ | ಮುಖ್ಯ ಮಾರುಕಟ್ಟೆಗಳು | ಉಪ ಮಾರುಕಟ್ಟೆಗಳು |
|---|---|---|---|
| 1 | ಬೆಂಗಳೂರು | 44 | 104 |
| 2 | ಮೈಸೂರು | 42 | 101 |
| 3 | ಬೆಳಗಾವಿ | 48 | 136 |
| 4 | ಗುಲ್ಬರ್ಗಾ | 36 | 71 |
| ಒಟ್ಟು | | 170 | 412 |